

# ಮತ್ತಿಘಟ್ಟಾದ ಮೋಹಕ ಜಲಧಾರೆ



■ ಚಿತ್ರ ಬರಹ:

**ಗಣಪತಿ ಹಾಸ್ಪುರ**

ಉತ್ತರ ಕನ್ನಡ ಜಿಲ್ಲೆ ರಾಜ್ಯದ 'ಜಲಪಾತಗಳ ಜಿಲ್ಲೆ' ಎಂದೇ ಪ್ರಸಿದ್ಧ. ಮಳೆಗಾಲದ ದಿನಗಳಲ್ಲಿ ಈ ಜಿಲ್ಲೆಯ ಹಳ್ಳಿಗಳತ್ತ ಕಾಲ್ನಡಿಗೆಯಲ್ಲಿ ಸಾಗಿದರೆ, ಎಲ್ಲೆಲ್ಲೂ ಜಲಪಾತಗಳದ್ದೇ ದರ್ಶನ! ವನಸಿರಿಯ ವೈಭವವನ್ನು ಹೊಂದಿರುವ ಈ ಜಿಲ್ಲೆಗೆ ಜಲಪಾತಗಳೇ ಕಿರೀಟದ್ದಂತೆ. ಮಳೆಗಾಲದ ದಿನಗಳಲ್ಲಿ ಈ ಜಲಧಾರೆಗಳು ಪ್ರವಾಸಿಗರ ಕಣ್ಮನಗಳಿಗೆ ರಸದೌತಣವನ್ನೇ ನೀಡುತ್ತದೆ. ಅಂತಹ ವಿಶಿಷ್ಟ ಆಕರ್ಷಣೆ, ಕಣ್ಮನ ಸೆಳೆಯುವ ಜಲಪಾತಗಳಲ್ಲಿ ಮತ್ತಿಘಟ್ಟಾದ ಜಲಪಾತವೂ ಒಂದು.

ವರುಷವಿಡೀ ಧುಮುಕುವ ಈ ಮತ್ತಿಘಟ್ಟಾ ಫಾಲ್ಸ್ ಶಿರಸಿ ತಾಲೂಕಿನಲ್ಲಿದೆ. ಶಿರಸಿಯಿಂದ ಸುಮಾರು 42 ಕಿ.ಮೀ. (ಹೆಗಡೆಕಟ್ಟಾ- ಯಾನ ಮಾರ್ಗದಲ್ಲಿ ಸಾಗಬೇಕು) ದೂರದಲ್ಲಿದೆ. ಈ ಜಲಧಾರೆಯೂ ಹಸೇಹಳ್ಳದಿಂದ ನಿರ್ಮಿತವಾಗಿದೆ. ಈ ಜಲಪಾತಕ್ಕೆ ಹೇಳಿಕೊಳ್ಳುವಷ್ಟು ಪ್ರಚಾರವೂ ಸಿಕ್ಕಿಲ್ಲ. ಅಲ್ಲದೆ ಮತ್ತಿಘಟ್ಟಾದ ಊರಿನಿಂದ ಈ ಜಲಪಾತ ವೀಕ್ಷಿಸಲು ಮಳೆಗಾಲದ ದಿನಗಳಲ್ಲಿ ತೆರಳುವವರು, ಹಸೇಹಳ್ಳಕ್ಕೆ ಅಡ್ಡವಾಗಿ ಬೊಂಬುಗಳಿಂದ ನಿರ್ಮಿಸಿದ ಕಾಲು ಸಂಕವನ್ನು ದಾಟಬೇಕು. ಹೀಗಾಗಿ ಈ ಜಲಪಾತ ವೀಕ್ಷಿಸಲು ಜನ ಬರುವುದು ವಿರಳ.

ಹಸೇಹಳ್ಳದಿಂದ ಉದ್ಭವವಾಗಿರುವ ಈ ಜಲಪಾತಕ್ಕೆ ಮತ್ತಿಘಟ್ಟಾ ಫಾಲ್ಸ್ ಎಂದು ಹೆಸರಿಟ್ಟವರು ಸ್ಥಳೀಯರೇ. ಮತ್ತಿಘಟ್ಟಾದ ಸರ್ಕಾರಿ ಶಾಲೆ ದಾಟಿ ಅರ್ಧ ಪರ್ಲಾಂಗ್ ಸಾಗಿದರೆ ಜಲಧಾರೆ ಧುಮುಕುವ ಶಬ್ದ ಕೇಳಿಸುತ್ತದೆ. ಅಲ್ಲಿನ ನಾಗಪತಿ ಹೆಗಡೆ ಅವರ ತೋಟದಿಂದ ಈ ಜಲಪಾತವನ್ನು ಅತೀ ಸಮೀಪದಿಂದ ನೋಡಬಹುದು. ಆದರೆ ಅದು ಅಡ್ಡ ಮುಖವಾಗಿ ಗೋಚರಿಸುತ್ತದೆ. ಅಡ್ಡವಾಗಿಯೇ ವೀಕ್ಷಿಸಿ ಮನಸ್ಸಿಗೆ ಉಲ್ಲಾಸ ನೀಡಲು ಈ ಸ್ಥಳ ಯೋಗ್ಯವಾದರೂ, ಛಾಯಾಗ್ರಹಣ ಮಾಡುವವರಿಗೆ ಇದು ಅಷ್ಟೇನೂ ಸೂಕ್ತ ಸ್ಥಳವಲ್ಲ. ಜಲಧಾರೆಯನ್ನು ಎದುರು ಭಾಗದಿಂದ ನೋಡಲು ಹಾಗೂ ಆಕರ್ಷಕ ಫೋಟೋ ಕ್ಲಿಕ್ಕಿಸಬೇಕೆಂದರೆ, ಪ್ರವಾಸಿಗರು ಅಲ್ಲಿಂದ ಸುಮಾರು ಎರಡು ಕಿ.ಮೀ ಕಾಲ್ನಡಿಗೆ ಮಾಡುವುದು ಅನಿವಾರ್ಯ.

ಗುಡ್ಡದ ಮೇಲಿನಿಂದ ಈ ಜಲಧಾರೆ ಅದ್ಭುತವಾಗಿಯೂ, ಮನಮೋಹಕವಾಗಿಯೂ ಕಾಣುತ್ತದೆ. ಸುಮಾರು 600 ಅಡಿ ಎತ್ತರದಿಂದ ಧುಮುಕುವ ಈ ಜಲಧಾರೆಯ ದೃಶ್ಯ ವೈಭವ ನೋಡಿಯೇ ಆನಂದಿಸಬೇಕು. ಧುಮುಕಿದ ನೀರು ಉತ್ತರಮುಖವಾಗಿ ಹರಿದು ಮುಂದೆ ರಾಮನಗರ ಹತ್ತಿರ ಗಂಗಾವಳಿಯನ್ನು ಸೇರುತ್ತದೆ.

ಮತ್ತಿಘಟ್ಟದ ಸುಂದರ ಪರಿಸರದ ಮಧ್ಯೆ ಇರುವ ಈ ಜಲಧಾರೆಯು ಹಾಲಿನಂತೆಯೇ ಧುಮುಕುತ್ತದೆ. ಮಳೆಗಾಲದ ದಿನಗಳಲ್ಲಿ ಮೈದುಂಬಿ ಹರಿಯುವ ಈ ಜಲಪಾತ ಬೇಸಿಗೆಯಲ್ಲಿ ಮಾತ್ರ ಸ್ವಲ್ಪ ಸೊರಗುತ್ತದೆ.